ಕಿಶೋರ್ ಘೋರ್ಪಡೆ, ರಾಮಾಜಿ, ಷಂಷೇರ್ ಬಾಬು, ಅಲ್ಲೀನಬಾನು ಮೊದಲಾದವರು. ಇವರೆಲ್ಲ ನಂದರ ಕಾಲದಲ್ಲಿ ಇದ್ದವರಲ್ಲ; ಬದಲಾಗಿ ಕ್ರಿ.ಶ.1818ರಲ್ಲಿ ಬ್ರಿಟಿಷರು ಪೇಶ್ವೆಯವರನ್ನು ಸೋಲಿಸಿದಾಗ ಮೈಸೂರ ಕಡೆ ಬಂದ ಮರಾಠ ಯೋಧರಿರಬಹುದು. ಮುಸ್ಲಿಮ್ ಹೆಸರುಗಳು ಚಂದ್ರಗುಪ್ತನ ಪಾಟಲೀಪುರದಲ್ಲಿ ಕೇಳಿಬರಲಿಕ್ಕಿಲ್ಲ.

ಈ ಕಾದಂಬರಿಯಲ್ಲಿ ಚಿತ್ರಿಸಿರುವ ಸೈನ್ಯ ವ್ಯವಸ್ಥೆ, ಯುದ್ಧ ಮತ್ತು ಆಡಳಿತದ ರೀತಿನೀತಿಗಳು ಶಾಸ್ತ್ರಿಗಳು ಕಂಡು ಕೇಳಿದ ಮೈಸೂರಿನ ಸನ್ನಿವೇಶಗಳೇ. ಮೈಸೂರು ಅರಮನೆಯಲ್ಲಿದ್ದ ಹದಿನೆಂಟು ಚಾವಡಿಗಳಲ್ಲಿ ಸುಂಕದ ಚಾವಡಿ, ಬೇಹಿನ ಚಾವಡಿ ಮೊದಲಾದವುಗಳ ಪ್ರಸ್ತಾಪ ಮುದ್ರಾಮಂಜೂಷದಲ್ಲಿ ಬರುತ್ತದೆ. ಗೊಲ್ಲರು, ಕಳ್ಳಬಂಟರು, ಕಾಮಾಟದವರು ಮತ್ತು ಕಟ್ಟುಕರಣೀಕರು ಎಂಬ ಹುದ್ದೆಗಳ ಉಲ್ಲೇಖ ಈ ಕೃತಿಯಲ್ಲಿದ್ದು ಅವೂ ಮೈಸೂರಿನಲ್ಲಿದ್ದ ಹುದ್ದೆಗಳೇ ಆಗಿವೆ. ಉದಾಹರಣೆಗೆ ಹದಿನೆಂಟು ಚಾವಡಿಗಳಲ್ಲಿ ಸಮ್ಮುಖದ ಚಾವಡಿಯಲ್ಲಿ ಒಳ ಬೊಕ್ಕಸದ ಅಧಿಕಾರಿಯಾಗಿ ಗೊಲ್ಲನನ್ನು ನೇಮಿಸಲಾಗುತ್ತಿತ್ತು. (ಮುಂದೆ ಅಠಾರ ಕಚೇರಿಗಳು – ಅಂದರೆ ಹದಿನೆಂಟು ಕಚೇರಿಗಳು – ಮೈಸೂರಿನಲ್ಲಿ ಪ್ರಾರಂಭವಾದಾಗ ಈ ಹದಿನೆಂಟು ಚಾವಡಿಯ ಕಲ್ಪನೆ ಆಳುವವರ ಮನಸ್ಸಿನಲ್ಲಿತ್ತೆ? ಕುತೂಹಲದ ಸಂಗತಿ.)

ಆಧುನಿಕ ಸಾಹಿತ್ಯಾಭ್ಯಾಸ ಇಲ್ಲದ, ಆದರೆ ಪಾರಂಪರಿಕ ಕಾವ್ಯಾಭ್ಯಾಸ ಮತ್ತು ವಿದ್ವತ್ತು ಇದ್ದ ಲೇಖಕರೊಬ್ಬರು ತಮ್ಮ ಸಮಕಾಲೀನ ವಿಚಾರಗಳಿಗೆ ಐತಿಹಾಸಿಕ ವಸ್ತುವೊಂದನ್ನು ಆರಿಸಿಕೊಂಡು ಕೃತಿ ರಚನೆಯ ಮೂಲಕ ಸ್ಪಂದಿಸಿರುವುದು ವಿಶೇಷವಾಗಿದೆ.

## ಕೆಂಪುನಾರಾಯಣ ಶಾಸ್ತ್ರಿಗಳು

'ಮುದ್ರಾಮಂಜೂಷ'ದ ಕರ್ತೃ ತಿರುಮಕೂಡಲು ನರಸೀಪುರದ ನಾರಾಯಣ ಶಾಸ್ತ್ರಿಗಳು. ಕವಿಯ ಕುಲನಾಮ 'ಶಾಸ್ತ್ರಿ' ಎಂಬುದು. ಈತನ ತಂದೆ ರಾಮಾಶಾಸ್ತ್ರಿಗಳು. ನಾರಾಯಣ ಶಾಸ್ತ್ರಿ ಹುಟ್ಟಿದ್ದು 1773ರಲ್ಲಿ. ಟಿ.ನರಸೀಪುರದ ನಾರಾಯಣ ಶಾಸ್ತ್ರಿಗಳು ತಮ್ಮ ವಿದ್ವತ್ತಿನ ಬಲದಿಂದ ಆಸ್ಥಾನದಲ್ಲಿ ಸ್ಥಾನ ಪಡೆದು ರಾಜಾನುಗ್ರಹಕ್ಕೆ ಪಾತ್ರರಾಗಿದ್ದರು. 'ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು' ಇಲ್ಲಿರುವ ಮುದ್ರಾಮಂಜೂಷದ ಓಲೆಗರಿ ಪ್ರತಿಯ ಮೇಲ್ಬದಿಯ ಮರದ ಹಲಗೆಯ ಮೇಲೆ ಅಂಟಿಸಿದ್ದ ಚೀಟಿಯಲ್ಲಿ 'ಮುದ್ರಾಮಂಜೂಷಾ, ಕರ್ತೃವು ಕೆಂಪುನಾರಾಯಣ ಶಾಸ್ತ್ರಿ, ಓಲೆಗಳು 209, ಲಿಪಿ ಕನ್ನಡ' ಎಂದು ಬರೆದಿರುವುದನ್ನು 'ಮುದ್ರಾಮಂಜೂಷ'ದ ಬಗ್ಗೆ ಪಿಎಚ್.ಡಿ ಮಾಡಿದ ಡಾ. ಕೆ.ಎಸ್.ಎನ್.ಉಡುಪರು ಸಂಶೋಧಿಸಿದ್ದಾರೆ. ಹಾಗಾಗಿ ಈ ಲೇಖಕರ ಹೆಸರನ್ನು ಕನ್ನಡಿಗರು 'ಕೆಂಪುನಾರಾಯಣ ಶಾಸ್ತ್ರಿ' ಎಂದು ಹೇಳುವುದು ಸೂಕ್ತವಾಗಿದೆ.

ಗ್ರಂಥಾಂತ್ಯದಲ್ಲಿ 'ಶ್ರೀ ನಾರಾಯಣ ಶರ್ಮ ವಿರಚಿತಮಪ್ಪ ಮುದ್ರಾಮಂಜೂಷಮೆಂಬ ಚಂಪೂಗ್ರಂಥ' ಎಂದು ಹೇಳಲಾಗಿದೆ. ಇದನ್ನು ಕಾವ್ಯವೆಂದೇ 'ಕವಿ' (ಲೇಖಕರು) ಹೇಳಿಕೊಂಡಿದ್ದಾರೆ. ಅದು ಭಾರತೀಯ ಪರಂಪರೆಯಲ್ಲಿ ಸಹಜವಾಗಿದೆ. ಆದರೆ ಇದನ್ನು ಚಂಪೂ ಗ್ರಂಥವೆಂದು ಹೇಳಿರುವುದು ಸರಿಯಲ್ಲ. ಇದು ಆಧುನಿಕ ಗದ್ಯ ಕೃತಿಯಷ್ಟೆ. ಲೇಖಕರು ಅಲ್ಲಲ್ಲಿ 'ನಾರಾಯಣ ಶರ್ಮ' ಎಂದು ಬಳಸುವುದರಿಂದ (ಶರ್ಮ ಎನ್ನುವುದನ್ನು ಎಲ್ಲ ಬ್ರಾಹ್ಮಣರು ಬಳಸುತ್ತಾರೆ) ಈತನ ಹೆಸರು ನಾರಾಯಣ ಎಂಬುದು ಗೊತ್ತಿದ್ದರೂ ಪ್ರಕಾಶಕನಿಗೆ 'ಶಾಸ್ತ್ರಿ' – 'ಶರ್ಮ' ಗೊಂದಲವಾಗಿ ಎರಡನ್ನೂ ಬಿಟ್ಟಿದ್ದಾನೆ. ಕೃತಿಕಾರನ ಪರಿಚಯವಿದ್ದ ಮತ್ತು ಅವನನ್ನು ಆಸ್ಥಾನದಲ್ಲಿ 'ಕೆಂಪು ಶಾಸ್ತ್ರಿಗಳು' ಎಂದು ಕರೆಯುವುದನ್ನು ಬಲ್ಲವನಾಗಿದ್ದ ಪ್ರಕಾಶಕ ಸ್ಟೀವನ್ಸನ್ನನು ಕೃತಿಕಾರನ ಹೆಸರನ್ನು 'ಕೆಂಪುನಾರಾಯಣ'ನೆಂದು ಮುದ್ರಿಸಿದ್ದಾನೆ. ಈ 'ಕೆಂಪು' ವಿಶೇಷಣ ಹೇಗೆ ಸೇರಿಕೊಂಡಿತೆಂಬುದನ್ನು ಡಾ. ಕೆ. ಎಸ್. ಎನ್. ಉಡುಪರು ಊಹಿಸಿದ್ದಾರೆ. ಆ ಅಸ್ಥಾನದಲ್ಲಿ ಕೆಲವು ಮಂದಿ ಶಾಸ್ತ್ರಿಗಳು ಇದ್ದ ಕಾರಣ ಕೆಂಪುಕೆಂಪಾಗಿ ಇದ್ದ ಈ ನಾರಾಯಣ ಶಾಸ್ತ್ರೀಗಳಿಗೆ 'ಕೆಂಪು ಶಾಸ್ತ್ರಿಗಳು' ಎನ್ನುತ್ತಿದ್ದಿರಬೇಕು ಎಂದು ಅವರು ತರ್ಕಿಸಿದ್ದಾರೆ. ಮುಮ್ಮಡಿಯವರ ಆಸ್ಥಾನದ ವಿದ್ವಾಂಸರಿಗೆ ಈ ರೀತಿ ಅಡ್ಡಹೆಸರು ಇಡುವುದು ಸಾಮಾನ್ಯವಾಗಿತ್ತಂತೆ. ಗೂಳಿ ಬಾಳಾಚಾರ್ಯರು, ಒಂಟೆ ರಾಮಾಚಾರ್ಯರು, ಬೇಳೆ ರಾಮರಾಯರು, ಪಾಯಸದ ಕೃಷ್ಣ, ಪ್ರೇತ ನರಸಿಂಹ ಶಾಸ್ತ್ರಿಗಳು, ಕೆಂಪುನಾರಾಯಣ ಶಾಸ್ತ್ರಿಗಳು - ಹೀಗೆ. ●